**ಅಸಲು ದಾವಾ ನಂಃ66/2018**
**ಪಿ.ಡಬ್ಲ್ಯೂ-03**

**<u>ದಿನಾಂಕಃ 10.08.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು: ಶ್ರೀ ಆರ್.ಎಸ್.ಎಂ., ಪ್ರತಿವಾದಿ ಪರ ವಕೀಲರಿಂದ</u>**

2. ನಾನು ನಾಲ್ಕನೇ ತರಗತಿವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ವ್ಯವಸಾಯ ಮಾಡುತ್ತೇನೆ. ನಾನು ಖಾಯಂ ಆಗಿ ಮನಮೈನಹಟ್ಟಿ ಗ್ರಾಮದ ಎಸ್.ಟಿ. ಕಾಲೋನಿಯಲ್ಲಿ ವಾಸವಾಗಿದ್ದೇನೆ. ಪ್ರತಿವಾದಿಯವರು ಎಲ್ಲರೂ ಮನಮೈನಹಟ್ಟಿ ಗ್ರಾಮದ ಲಂಬಾಣಿಹಟ್ಟಿಯಲ್ಲಿ ವಾಸವಾಗಿರುತ್ತಾರೆ ಎಂದರೆ ಸಾಕ್ಷಿಯು ಮನಮೈನಹಟ್ಟಿ ಗ್ರಾಮ ಎಂದರೆ ಒಂದೇ ಎಲ್ಲರೂ ಅಲ್ಲೇ ವಾಸವಾಗಿರುತ್ತೇವೆ ಎಂದು ನುಡಿಯುತ್ತಾರೆ. ಮನಮೈನಹಟ್ಟಿ ಗ್ರಾಮದಲ್ಲಿ ಲಂಬಾಣಿಹಟ್ಟಿ ಇರುತ್ತದೆ ಎಂದರೆ ಸರಿ. ಮನಮೈನಹಟ್ಟಿ ಗ್ರಾಮದ ಎಸ್.ಟಿ. ಕಾಲೋನಿ ಬೇರೆ ಇರುತ್ತದೆ ಎಂದರೆ ಸಾಕ್ಷಿಯು ಎಲ್ಲರ ಮನೆಗಳು ಹೊಂದಿಕೊಂಡು ಇರುತ್ತವೆ.

3. ನನ್ನ ಮನೆಯಿಂದ 4ನೇ ಪ್ರತಿವಾದಿಯಾದ ತಿಪ್ಪಮ್ಮನ ಮನೆ ಸುಮಾರು 200 ಮೀಟರ್ ದೂರದಲ್ಲಿರುತ್ತದೆ. ಮನಮೈನಹಟ್ಟಿ ಎನ್.ಮಹದೇವಪುರ ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುತ್ತದೆ ಎಂದರೆ ಸರಿ. ನಾನು ಎನ್.ಮಹದೇವಪುರ ಗ್ರಾಮ ಪಂಚಾಯಿತಿಯಲ್ಲಿ ಸದಸ್ಯನಾಗಿದ್ದೇನು ಎಂದರೆ ಸರಿ. ನನ್ನ ಹೆಂಡತಿ ಎನ್.ಮಹದೇವಪುರ ಗ್ರಾಮ ಪಂಚಾಯಿತಿಯ ಅಧ್ಯಕ್ಷೆಳಾಗಿದ್ದಳು ಎಂದರೆ ಸರಿ. ನಾನು ಗ್ರಾಮ ಪಂಚಾಯಿತಿ ಸದಸ್ಯನಾಗಿದ್ದರಿಂದ ಪಂಚಾಯಿತಿಯಲ್ಲಿ ಏನೇನು ವ್ಯವಹಾರ ಆಗುತ್ತದೆ ಅಂತ ತಿಳಿದಿರುತ್ತದೆ ಎಂದರೆ ಸರಿ. ನಾನು ಪಂಚಾಯಿತಿ ಸದಸ್ಯನಾಗಿರುವುದರಿಂದ ಪಂಚಾಯಿತಿಗೆ ಕೊಡುವ ಎಲ್ಲ ಅರ್ಜಿಗಳ ಕುರಿತು ನನಗೆ ಮಾಹಿತಿ ಇರುತ್ತದೆ ಎಂದರೆ ಸಾಕ್ಷಿಯು ಪಿ.ಡಿ.ಓ. ಇವರಿಗೆ ಮಾಹಿತಿ ಇರುತ್ತದೆ ಎಂದು ನುಡಿಯುತ್ತಾರೆ. ಪಿ.ಡಿ.ಓ.ರವರು ಪಂಚಾಯಿತಿ ಸದಸ್ಯರನ್ನು ಸೇರಿಸಿಕೊಂಡು ಸಭೆ ನಡೆಸುತ್ತಾರೆ ಎಂದರೆ ಸರಿ.

4. 4ನೇ ಪ್ರತಿವಾದಿಯಾದ ತಿಪ್ಪಮ್ಮನ ಗಂಡ ಯುವರಾಜನಾಯ್ಕ ನನಗೆ ಗೊತ್ತು ಎಂದರೆ ಸರಿ. ಯುವರಾಜನಾಯ್ಕ ಹಾಲಿ ತೀರಿಕೊಂಡಿರುತ್ತಾರೆ ಎಂದರೆ ಸರಿ. ಯುವರಾಜನಾಯ್ಕ ತೀರಿಕೊಂಡ ನಂತರ ಅವರ ವಾರಸುದಾರರು 4ನೇ ಪ್ರತಿವಾದಿಯಾದ ತಿಪ್ಪಮ್ಮ ಮತ್ತು 5ನೇ ಪ್ರತಿವಾದಿ ಚಂದ್ರಶೇಖರನಾಯ್ಕ ಎಂದರೆ ಸರಿ. ಯುವರಾಜನಾಯ್ಕ ಮನಮೈನಹಟ್ಟಿ ಗ್ರಾಮದ ಲಂಬಾಣಿಹಟ್ಟಿಯಲ್ಲಿ ಒಂದು ಗುಡಿಸಲಿನಲ್ಲಿ ತನ್ನ ಹೆಂಡತಿ ಮಗನೊಂದಿಗೆ ವಾಸವಾಗಿದ್ದನು ಎಂದರೆ ಸಾಕ್ಷಿಯು ಗುಡಿಸಲು ನೋಡಿಲ್ಲ, ಮನೆ ಇತ್ತು ಎಂದು ನುಡಿಯುತ್ತಾರೆ. ನಾನು ನೋಡಿದಂತಹ ಮನೆಯು ಕಡಪ ಬಂಡೆ ಮನೆಯಾಗಿರುತ್ತದೆ. ಕಡಪ ಬಂಡೆ ಮನೆಗಿಂತ ಪೂರ್ವದಲ್ಲಿ ಅವರಿಗೆ ಸೇರಿದ ಗುಡಿಸಲು ಇದ್ದು ಅದು ಬಿದ್ದು ಹೋದ ಕಾರಣಕ್ಕೆ ಮಣ್ಣಿನ ಮಾಳಿಗೆಯ ಕಡಪ ಬಂಡೆ ಮನೆಯನ್ನು ಕಟ್ಟಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಅದನ್ನು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ.

5. ಯುವರಾಜನಾಯ್ಕ ವಾಸ ಮಾಡುತ್ತಿದ್ದ ಮನೆಗೆ ಪಂಚಾಯಿತಿಯಿಂದ ಖಾತೆ ಆಗಿತ್ತು ಎಂದರೆ ಸಾಕ್ಷಿಯು ಇತ್ತೆನೋ ಎಂದು ನುಡಿಯುತ್ತಾರೆ. ಯುವರಾಜನಾಯ್ಕ ಇದ್ದಂತಹ ಮನೆಯಲ್ಲಿಯೇ ಈಗ ಅವರ ಹೆಂಡತಿ ತಿಪ್ಪಮ್ಮ ಹೊಸ ಮನೆಕಟ್ಟಿಕೊಂಡು ವಾಸವಾಗಿದ್ದಾಳೆ ಎಂದರೆ ಸಾಕ್ಷಿಯು ಹೌದು ಎಂದು ತಲೆ ಅಲ್ಲಾಡಿಸುತ್ತಾರೆ. ತಿಪ್ಪಮ್ಮ ವಾಸಿಸುತ್ತಿರುವ ಮನೆಗೆ ಪಂಚಾಯಿತಿಯಲ್ಲಿ ಖಾತೆ ಇರುತ್ತದೆ ಎಂದರೆ ನಾನು ನೋಡಿರುವುದಿಲ್ಲ. ತಿಪ್ಪಮ್ಮ ವಾಸಿಸುತ್ತಿರುವ

ಮನೆಯ ಪೂರ್ವಕ್ಕೆ ರಾಂಜೀನಾಯ್ಕ ಮನೆ ಬರುತ್ತದೆ ಎಂದರೆ ಸಾಕ್ಷಿಯು  ರಾಂಜೀನಾಯ್ಕನ ಮಗ

ಮಂಜುನಾಥನ ಮನೆ ಬರುತ್ತದೆ ಎಂದು ನುಡಿಯುತ್ತಾರೆ. ತಿಪ್ಪಮ್ಮ ವಾಸವಾಗಿರುವ ಮನೆಯ ಪಶ್ಚಿಮ ದಿಕ್ಕಿಗೆ ಸಣ್ಣ ಓಣಿ ಬರುತ್ತದೆ ಎಂದರೆ ಸರಿ. ಓಣಿ ಪಶ್ಚಿಮಕ್ಕೆ ಸೋಮ್ಲಾನಾಯ್ಕನ ಮನೆ ಬರುತ್ತದೆ ಎಂದರೆ ಸರಿ. ತಿಪ್ಪಮ್ಮ ವಾಸವಾಗಿರುವ ಮನೆಯ ಉತ್ತರ ದಿಕ್ಕಿಗೆ ಸಾರ್ವಜನಿಕ ರಸ್ತೆ ಬರುತ್ತದೆ ಎಂದರೆ ಸರಿ. ತಿಪ್ಪಮ್ಮ ವಾಸವಾಗಿರುವ ಮನೆಯ ದಕ್ಷಿಣ ದಿಕ್ಕಿಗೆ ಸೇದಾಬಾಯಿ ರಾಮನಾಯ್ಕ ಇವರ ಮನೆ ಬರುತ್ತದೆ ಎಂದರೆ ಸರಿ. ಮೇಲಿನ ಚೆಕ್ಕುಬಂಧಿಯಲ್ಲಿ ತಿಪ್ಪಮ್ಮ ಮನೆಕಟ್ಟಿಕೊಳ್ಳಲು ಎನ್.ಮಹದೇವಪುರ ಗ್ರಾಮ ಪಂಚಾಯಿತಿಯಿಂದ ಸಾಲ ತೆಗೆದುಕೊಂಡಿದ್ದಳು ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ.

6. ಪಂಚಾಯಿತಿಯಿಂದ ಸಾಲ ಕೊಡಬೇಕಾದರೆ ಸಾಲಕೊಟ್ಟ ಆಸ್ತಿಯನ್ನು ಆಧಾರ ಮಾಡಿಸಿಕೊಂಡು, ಆಧಾರ ಪತ್ರವನ್ನು ಉಪನೋಂದಾಣಾಧಿಕಾರಿ ಕಚೇರಿಯಲ್ಲಿ ನೋಂದಾಣಿ ಮಾಡಿಸಬೇಕಾಗುತ್ತದೆ ಎಂದರೆ ಸರಿ. ತಿಪ್ಪಮ್ಮ ಕೂಡ ಪಂಚಾಯಿತಿಗೆ ತನ್ನ ಆಸ್ತಿಯನ್ನು ಆಧಾರ ಮಾಡಿಸಿ ನಂತರ ಸಾಲ ತೆಗೆದುಕೊಂಡಿರುತ್ತಾಳೆ ಎಂದರೆ ಸಾಕ್ಷಿಯು ಹೌದು ಎಂದು ತಲೆ ಅಲ್ಲಾಡಿಸುತ್ತಾರೆ. ಪಂಚಾಯಿತಿಯಿಂದ ಸಾಲ ಕೊಡಬೇಕಾದರೆ ಪಿ.ಡಿ.ಓ., ಅಥವಾ ಕಾರ್ಯದರ್ಶಿಗಳು ಸ್ಥಳಕ್ಕೆ ಬಂದು ಮಹಜರ್ ಜರುಗಿಸಿ ಎಲ್ಲ ದಾಖಲೆಗಳನ್ನು ಪರಿಶೀಲಿಸಿ ಅವುಗಳು ಸರಿ ಇದ್ದರೆ ಮಾತ್ರ ಸಾಲ ಕೊಡುತ್ತಾರೆ ಎಂದರೆ ಸಾಕ್ಷಿಯು ಹೌದು ಎಂದು ತಲೆ ಅಲ್ಲಾಡಿಸುತ್ತಾರೆ.

7. ಯುವರಾಜನಾಯ್ಕ ಜೀವಂತ ಇದ್ದಂತಹ ಮನೆಯಲ್ಲಿ ಹಾಲಿ ತಿಪ್ಪಮ್ಮ ಹೊಸ ಮನೆ ಕಟ್ಟಿಸಿಕೊಂಡು ವಾಸವಾಗಿದ್ದು, ಸದರಿ ಮನೆಯಲ್ಲಿ ಯಾರಿಗೂ ಸಹ ಹಕ್ಕು, ಅಧಿಕಾರ ಮತ್ತು ಸ್ವಾಧೀನ ಇರುವುದಿಲ್ಲ ಎಂದರೆ ಅವರ ಅಣ್ಣ ತಮ್ಮಂದಿರು ಏನು ಮಾಡಿಕೊಂಡಿರುತ್ತಾರೋ ಸಾಕ್ಷಿಯು ಅಷ್ಟೊಂದು ಗೊತ್ತಿಲ್ಲ, ಅಕ್ಕಿ ಮಾರುವುದು ಮಾತ್ರ ಗೊತ್ತು ಎಂದು ನುಡಿಯುತ್ತಾರೆ. ಅಕ್ಕಿಯನ್ನು ಸೀನಮ್ಮ ಮಾರಾಟ ಮಾಡುತ್ತಿದ್ದನು.

8. ತಿಪ್ಪಮ್ಮ ವಾಸವಾಗಿರುವ ಮನೆಗೆ ಪಂಚಾಯಿತಿಯವರು 253 ಎಂದು ಖಾತೆ ನಂಬರ್ ನೀಡಿರುತ್ತಾರೆ ಎಂದರೆ ಸರಿ. ಅದರ ಅಳತೆ ಪೂರ್ವ-ಪಶ್ಚಿಮ 6.5 ಮೀಟರ್, ಉತ್ತರ-ದಕ್ಷಿಣ 7.5 ಮೀಟರ್ ಇರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ಪಂಚಾಯಿತಿ ಖಾತೆ ನಂಬರ್.253 ರಲ್ಲಿ ಇರುವ ಪೂರ್ವ-ಪಶ್ಚಿಮ 6.5 ಮೀಟರ್, ಉತ್ತರ-ದಕ್ಷಿಣ 7.5 ಮೀಟರ್ ನೇದ್ದರಲ್ಲಿ ಇರುವ ಮನೆಗೆ ತಿಪ್ಪಮ್ಮ ಇವರನ್ನು ಬಿಟ್ಟರೆ ಯಾರಿಗೂ ಸಹ ಹಕ್ಕು, ಅಧಿಕಾರ ಮತ್ತು ಮಾಲೀಕತ್ವ ಇರುವುದಿಲ್ಲ ಎಂದರೆ ಸಾಕ್ಷಿಯು ಅವರೇ ಇರುತ್ತಾರೆ ಎಂದು

ನುಡಿಯುತ್ತಾರೆ.



9. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ವಾದಿಯ ತಂದೆ ಸೋಮ್ಲಾನಾಯ್ಕ ಮನಮೈನಹಟ್ಟಿಯಲ್ಲಿ 3-4 ಮನೆಗಳನ್ನು ಸಂಪಾದಿಸಿದರು ಅಂತ ಹೇಳಿದ್ದು, ಅವರು ಎಷ್ಟು ಮನೆಗಳನ್ನು ಹೊಂದಿದ್ದರು ಎಂದರೆ ಸಾಕ್ಷಿಯು 3-4 ಮನೆಗಳನ್ನು ಅವರ ಅಣ್ಣ ತಮ್ಮಂದಿರು ಒಂದೇ ಸಾಲಿನಲ್ಲಿ ಕಟ್ಟಿಸಿಕೊಂಡಿದ್ದರು ಎಂದು ನುಡಿಯುತ್ತಾರೆ. ಸದರಿ 3-4 ಮನಗೆಳ ಖಾತೆ ನಂಬರ್, ವಿಸ್ತೀರ್ಣ ಮತ್ತು ಚೆಕ್ಕುಬಂಧಿಯನ್ನು ಹೇಳಲು ಬರುವುದಿಲ್ಲ. ಸದರಿ 3-4 ಮನೆಗಳು ಯಾರ ಹೆಸರಿನಲ್ಲಿ ಖಾತೆ ಆಗಿದ್ದವು ಅಂತ ಹೇಳಲು ಬರುವುದಿಲ್ಲ. ಆ ಕುರಿತು ನಾನು ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸೋಮ್ಲಾನಾಯ್ಕನ ಮಕ್ಕಳುಗಳು ಬೇರೆಯಾಗಿ ವಾಸವಾಗಿದ್ದರು ಅಂತ ಹೇಳಿದ್ದು, ಅವರು ಯಾವಾಗ ಬೇರೆಯಾಗಿದ್ದರು ಅಂತ ನನಗೆ ಹೇಳಲು ಬರುವುದಿಲ್ಲ. ನನ್ನ ಸಮಕ್ಷಮ ಅವರು ಬೇರೆಯಾಗಿರುವುದಿಲ್ಲ. ಅವರು ಬೇರೆಯಾಗಿರುವ ಕುರಿತು ದಾಖಲೆಗಳು ಇರುವ ಬಗ್ಗೆ ನನಗೆ ಗೊತ್ತಿಲ್ಲ.

10. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ವಾದಿಯ ತಂದೆ ಸೋಮ್ಲಾನಾಯ್ಕ ಸಂಪಾದಿಸಿದ ಮನೆಗಳಲ್ಲಿ ರಾಂಜೀನಾಯ್ಕ, ಯುವರಾಜನಾಯ್ಕ ಮತ್ತು ವಾದಿ ಸೀನಾನಾಯ್ಕನಿಗೆ ಭಾಗಗಳು ಬಂದಿರುತ್ತವೆ ಅಂತ ಹೇಳಿದ್ದು, ಯಾರ್ಯಾರಿಗೆ ಯಾವ ಮನೆಗಳು, ಅವುಗಳ ಚೆಕ್ಕುಬಂಧಿ, ಖಾತೆ ನಂಬರ್ ಮತ್ತು ಅಳತೆಯನ್ನು ಹೇಳಲು ಬರುವುದಿಲ್ಲ. ಈ ಕುರಿತು ನಾನು ಯಾವುದೇ ದಾಖಲೆಗಳನ್ನು ನೋಡಿರುವುದಿಲ್ಲ. ವಾದಿ ಸೀನಾನಾಯ್ಕನ ಭಾಗಕ್ಕೆ ಬಂದಂತಹ ಮನೆಯನ್ನು ಖಾತೆ ಮಾಡಿಸಿಕೊಂಡಿಲ್ಲ ಅಂತ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿದ್ದು, ಈ ಕುರಿತು ನಾನು ಯಾವುದೇ ದಾಖಲೆಯನ್ನು ನೋಡಿರುವುದಿಲ್ಲ ಮತ್ತು ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ವಾದಿ ಸೀನಾನಾಯ್ಕನ ಭಾಗಕ್ಕೆ ಬಂದಂತಹ ಮನೆಯ ಖಾತೆಯು ಅವರ ತಂದೆ ಸೋಮ್ಲಾನಾಯ್ಕನ ಹೆಸರಿಗೆ ಇರುತ್ತದೆ ಅಂತ ಹೇಳಿದ್ದು, ಅದರ ಖಾತೆ ನಂಬರ್ ನನಗೆ ಹೇಳಲು ಬರುವುದಿಲ್ಲ. ಸದರಿ ಮನೆಯ ಅಳತೆ ಮತ್ತು ಚೆಕ್ಕುಬಂಧಿಯನ್ನು ಹೇಳಲು ಬರುವುದಿಲ್ಲ.

11. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಯುವರಾಜನಾಯ್ಕನ ಭಾಗಕ್ಕೆ ಬಂದಂತಹ ಮನೆಯನ್ನು ಭೀಮಣ್ಣನಾಯ್ಕನನಿಗೆ ಮಾರಾಟ ಮಾಡಿರುವುದಾಗಿ ನಾನು ಹೇಳಿ ಬರೆಸಿರುವುದಿಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಯುವರಾಜನಾಯ್ಕನಿಗೆ

ಸ್ಥಳೀಯವಾಗಿ ಯಾವುದೇ ಮನೆ ಇಲ್ಲ ಅಂತ ಹೇಳಿದ್ದು, ಯುವರಾಜನಾಯ್ಕ ಜೀವಂತ ಇದ್ದಾಗ



ಇದ್ದಂತಹ ಮನೆಯು ಬಿದ್ದು ಹೋಗಿದ್ದರಿಂದ ಅದೇ ಜಾಗದಲ್ಲಿ ತಿಪ್ಪಮ್ಮ ಈಗ ಹೊಸ ಮನೆ ಕಟ್ಟಿಸಿಕೊಂಡು ವಾಸವಾಗಿದ್ದಾಳೆ ಎಂದರೆ ಸಾಕ್ಷಿಯು ಅದೇನು ನಾನು ನೋಡಿಲ್ಲ ಎಂದು ನುಡಿಯುತ್ತಾರೆ. ಯುವರಾಜನಾಯ್ಕ ಜೀವಂತ ಇದ್ದಾಗ ಇದ್ದಂತಹ ಮನೆಯು ಬಿದ್ದು ಹೋಗಿದ್ದರಿಂದ ಅದೇ ಜಾಗದಲ್ಲಿ ತಿಪ್ಪಮ್ಮ ಈಗ ಹೊಸ ಮನೆ ಕಟ್ಟಿಸಿಕೊಂಡು ವಾಸವಾಗಿರುವ ವಿಚಾರ ನನಗೆ ಗೊತ್ತಿದ್ದರು ಕೂಡ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

12. ರಾಂಜೀನಾಯ್ಕನ ಮನೆಯ ಖಾತೆ ನಂಬರ್, ಅಳತೆ ಮತ್ತು ಚೆಕ್ಕುಬಂಧಿಯನ್ನು ಹೇಳಲು ಬರುವುದಿಲ್ಲ. ರಾಂಜೀನಾಯ್ಕನ ಮನೆಗೆ ಸಂಬಂಧಿಸಿದ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ವಾದಿ ಸೀನಾನಾಯ್ಕನ ಮನೆಯ ಖಾತೆ ನಂಬರ್, ಅಳತೆ ಮತ್ತು ಚೆಕ್ಕುಬಂಧಿಯನ್ನು ಹೇಳಲು ಬರುವುದಿಲ್ಲ. ದಾವಾ ಸ್ವತ್ತಿನ ಖಾತೆ ನಂಬರ್, ಅಳತೆ ಮತ್ತು ಚೆಕ್ಕುಬಂಧಿಯನ್ನು ಹೇಳಲು ಬರುವುದಿಲ್ಲ. ದಾವಾ ಸ್ವತ್ತಿಗೆ ಸಂಬಂಧಿಸಿದ ಪಂಚಾಯಿತಿಯಲ್ಲಿ ದಾಖಲೆಗಳನ್ನು ನೋಡಿರುವುದಿಲ್ಲ. ವಾದಿ ಸೀನಾನಾಯ್ಕ ಇವರು ನೀಡಿಕೊಂಡು ಬಂದಿದ್ದಾರೆ ಅಂತ ಹೇಳುವ ಮನೆಯ ಖಾತೆ ನಂಬರ್, ಅಳತೆ ಮತ್ತು ಚೆಕ್ಕುಬಂಧಿಯನ್ನು ಹೇಳಲು ಬರುವುದಿಲ್ಲ.

**(ಮುಂದುವರೆದ ಪಾಟೀ ಸವಾಲನ್ನು ಮಧ್ಯಾಹ್ನ 02.45 ಗಂಟೆಗೆ ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.